(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

6. ನಿಮಗೆ ಕಂಪ್ಯೂಟರ್ ಬಗ್ಗೆ ಪರಿಣಿತಿ ಇರುವ ಬಗ್ಗೆ ಮತ್ತು ಕಂಪ್ಯೂಟರ್ ಲಿಟರೆಸಿ ಟೆಸ್ಟನಲ್ಲಿ ಪಾಸಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಆದರೆ ಆ ಬಗ್ಗೆ ನಮ್ಮ ಸೇವಾ ಪುಸ್ತಕದಲ್ಲಿ ನಮೂದಾಗಿರುತ್ತದೆ ಎನ್ನುತ್ತಾರೆ. ಹಗಲು ಮತ್ತು ರಾತ್ರಿ ವೇಳೆಯಲ್ಲಿ ವಿಡಿಯೋವನ್ನು ಚಿತ್ರಿಕರಿಸಿದ್ದಲ್ಲಿ ಅದರ ವಾತಾವರಣ ತಿಳಿದು ಬರುತ್ತದೆ ಎಂದರೆ ಸಾಕ್ಷಿ ಅದು ಹವಮಾನದ ಮೇಲೆ ನಿರ್ಧರಿಸಲ್ಪಡುತ್ತದೆ ಎನ್ನುತ್ತಾರೆ. ರಾತ್ರಿ ವೇಳೆಯಲ್ಲಿ ಫೋಟೋ ತೆಗೆದರೆ ಅಥವಾ ವಿಡಿಯೋವನ್ನು ಚಿತ್ರಿಕರಿಸಿದರೆ ಅದು ರಾತ್ರಿ ವೇಳೆಯಲ್ಲಿ ತೆಗೆದಿರುವುದು ಮತ್ತು ಚಿತ್ರಿಕರಿಸಿರುವುದು ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿ ಈ ಪ್ರಕರಣದಲ್ಲಿ ನಾನು ರಾತ್ರಿ ವೇಳೆಯಲ್ಲಿ ಯಾವುದೇ ಫೋಟೋ ತೆಗೆದಿಲ್ಲ ಮತ್ತು ವಿಡಿಯೋ ಚಿತ್ರಿಕರಿಸಿಲ್ಲ ಎನ್ನುತ್ತಾರೆ. ನಿಮಗೆ ಫೋಟೋಗ್ರಫಿ, ವಿಡಿಯೋಗ್ರಫಿ ಮತ್ತು ಕಂಪ್ಯೂಟರ್ ಬಗ್ಗೆ ಸಂಪೂರ್ಣ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಸಾಮಾನ್ಯ ಜ್ಞಾನ ಇದೆ ಎನ್ನುತ್ತಾರೆ. ಸದರಿ ಜ್ಞಾನದ ಪ್ರಕಾರ ಫೋಟೋಗಳನ್ನು ರಾತ್ರಿ ವೇಳೆಯಲ್ಲಿ ತೆಗೆಯಲಾಗಿದೆಯೇ ಅಥವಾ

ಹಗಲು ವೇಳೆಯಲ್ಲಿ ತೆಗೆಯಲಾಗಿದೆಯೇ ಎಂದು ಗೊತ್ತಾಗುತ್ತದೆ ಎಂದರೆ ಸಾಕ್ಷಿ ಮೇಲ್ನೋಟಕ್ಕೆ ಗೊತ್ತಾಗಬಹುದು, ಆದರೆ ಅದರ ಮೂಲವನ್ನು ತಂತ್ರಜ್ಞರಿಂದ ತಿಳಿದುಕೊಳ್ಳಬೇಕಾಗುತ್ತದೆ ಎನ್ನುತ್ತಾರೆ.

7. ನೀವು ಹೇಳಿದಂತೆ ಯಾವುದೇ ವಿಡಿಯೋಗಳನ್ನು ಚಿತ್ರಿಕರಿಸಿಲ್ಲ ಎಂದರೆ ಸರಿಯಲ್ಲ. ವಿಡಿಯೋಗಳನ್ನು ಚಿತ್ರಿಕರಿಸಲು ನಿಮಗೆ ಲಿಖಿತವಾಗಿ ನೇಮಿಸಲಾಗಿತ್ತೇ ಎಂದರೆ ಸಾಕ್ಷಿ ಇಲ್ಲ ತನಿಖಾಧಿಕಾರಿಗಳ ಮೌಖಿಕ ಸೂಚನೆಯ ಮೇರೆಗೆ ಚಿತ್ರಿಕರಿಸಿದ್ದೇನೆ ಎನ್ನುತ್ತಾರೆ. ನಿಮ್ಮ ಸಮಕ್ಷಮ ತನಿಖಾಧಿಕಾರಿಗಳು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ನಮೂದಿಸಿರುವ ಯಾವುದೇ ನಿಯಮಗಳನ್ನು ನೀವು ಅನುಸರಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ನೀವು ನಿಪಿ.37 ದಾಖಲೆಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನೀವು ತಯಾರಿಸಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ